(ದಿನಾಂಕಃ 16.11.2017 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

*<u>ಮಧ್ಯಂತರ ಅರ್ಜಿಯ ಮೇರೆಗೆ ಮುಂದುವರಿದ ಪಾಟೀ ಸವಾಲು 1ನೇ ಪ್ರತಿವಾದಿ ಪರ ಶ್ರೀ. ಇಎ ವಕೀಲರಿಂದಃ</u>*

ಕೇಸಿನಲ್ಲಿ ಇಲ್ಲಿಯ ವರೆಗೂ ಏನು ನಡೆದಿರುತ್ತದೆ ಎಂದು ನನಗೆ ಗೊತ್ತಿರುತ್ತದೆ. ದಾವೆಯಲ್ಲಿ ಸಲ್ಲಿಸಿರುವ ದಾಖಲಾತಿಗಳನ್ನು ನಾನೇ ನನ್ನ ವಕೀಲರಿಗೆಕೊಟ್ಟಿರುತ್ತೇನೆ. ಸಾಕ್ಷಿಯು ಸ್ವತಃ ಕೆಲವೊಂದು ಮನೆಯಲ್ಲಿತ್ತು ಕೆಲವೊಂದು ಒದಗಿಸಿಕೊಟ್ಟಿರುತ್ತೇನೆ. ನಾನು ಅನಕ್ಷರಸ್ಥ ನನಗೆ ಸಿಕ್ಕಿದ ದಾಖಲೆಗಳನ್ನೆಲ್ಲಾ ನನ್ನ ವಕೀಲರಿಗೆ ಕೊಟ್ಟಿರುತ್ತೇನೆ. ಜಿಪಿಎ ರದ್ದುಮಾಡಿದ ಬಗ್ಗೆ ದಾಖಲೆಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಮಾಡಿರುತ್ತೇನಾ ಎಂದರೆ ಹಾಜರುಮಾಡಿರುತ್ತೇನೆ. ದಿಃ1-4-1993 ವಾಸುದೇವ ಮೂರ್ತಿ ಅವರ ಜೊತೆ ಮಾಡಿದ ಜಿಪಿಎಯ ವಾದಿ ಪರ ಹಾಜರುಮಾಡಿದ ಜೆರಾಕ್ಸ್ ದಾಖಲಾತಿಯನ್ನು ಸಾಕ್ಷಿಗೆ ತೋರಿಸಲಾಗಿ ಅದನ್ನು ಎಲ್ಲಿಂದ ತೆಗೆದಿರುತ್ತೀರಾ ಎಂದರೆ ನ್ಯಾಯಾಲಯದಿಂದ ತೆಗೆದುಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಅದರ ದೃಢೀಕೃತ ನಕಲನ್ನು ಹಾಜರುಮಾಡಿರುತ್ತೇನಾ ಎಂದರೆ ಸಾಕ್ಷಿಯು ನನ್ನ ಬಳಿ ಇದ್ದ ಎಲ್ಲಾ ದಾಖಲಾತಿಯನ್ನು ಹಾಜರುಮಾಡಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಜೆರಾಕ್ಸ್ ದಾಖಲಾತಿ ನ್ಯಾಯಾಲಯದಿಂದ ಪಡೆದುಕೊಂಡಿರುವುದಿಲ್ಲ ವಾಸುದೇವ ಮೂರ್ತಿ ಅವರ ಜೊತೆ ಸೇರಿ ಮೂಲ ದಾಖಲಾತಿ ಈ ರೀತಿ ಮಾಡಿರುತ್ತೇವೆ ಎಂದರೆ ಸಾಕ್ಷಿಯು ಅದು ಡೂಪ್ಲಿಕೇಟ್ ದಾಖಲೆ ಎಂದು ಸಾಕ್ಷಿ ನುಡಿಯುತ್ತಾರೆ.

ವಾಸುದೇವ ಮೂರ್ತಿ ನಮ್ಮ ವಿರುದ್ಧ ಒಂದು ದಾವೆ ಹೂಡಿದಾಗ ನಮಗೆ ಆ ದಾಖಲೆಯ ಬಗ್ಗೆ ಗೊತ್ತಾಗಿರುತ್ತದೆ ಆದರೆ ಆ ದಾವೆಯ ಸಂಖ್ಯೆ ನನಗೆ ನೆನಪಿರುವುದಿಲ್ಲ. ವಾಸುದೇವ ಮೂರ್ತಿ ವಿರುದ್ಧ ನಾವು ಯಾವುದೇದಾವೆ ಹಾಕಿರುವುದಿಲ್ಲ ಮತ್ತು ಯಾವುದೇ ದೂರು ಕೊಟ್ಟಿರುವುದಿಲ್ಲ ಆದರೆ ಅವರೇ ನಮ್ಮ ವಿರುದ್ಧ ದಾವೆ ಹಾಕಿರುತ್ತಾರೆ. ವಾಸುದೇವ ಮೂರ್ತಿ ಮೋಸ ಮಾಡಿ ನಮ್ಮ ಬಳಿ ಬರೆಸಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

( ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಎಂ ಒ

ಕೆ. ಶ್ರೀವಿದ್ಯಾ
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ರಾಮನಗರ.